ದಿ.06.08.2026

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ.1953/2025**

**ಪ್ರಾಸಾಃ2**

**ಚಾಸಾಃ2**

| | | |
|---|---|---|
| ಸಾಕ್ಷಿಯ ಹೆಸರು | : | ಲೋಕೇಶ್ |
| ತಂದೆಯ ಹೆಸರು | : | ಸದಾಶಿವಪ್ಪ |
| ವಯಸ್ಸು | : | 36 ವರ್ಷ |
| ಕೆಲಸ | : | ವ್ಯವಸಾಯ |
| ವಾಸ | : | ಚೀರನಹಳ್ಳಿ ಗ್ರಾಮ |

**ದಿಃ06.08.2026 ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ಸಾಕ್ಷಿಗೆ ಒಂದು ದಾಖಲೆಗಳನ್ನು ತೋರಿಸಿದ್ದು, ಅದು ನೋಟೀಸ್ ಮತ್ತು ಮಹಜರಾಗಿದ್ದು, ಸಾಕ್ಷಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಗಳನ್ನು ನಿಪಿ-3 ಮತ್ತು 4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಮತ್ತು ನಿಪಿ-4(ಎ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು 6 ತಿಂಗಳ ಹಿಂದೆ ಮಾಡಿರುತ್ತೇನೆ. ಸದರಿ ಸಹಿಗಳನ್ನು ಚಿತ್ರಹಳ್ಳಿ ಗೇಟ್ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯಲ್ಲಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ನನ್ನ ಮುಂದೆ ಯಾವುದೇ ಪಂಚನಾಮೆ ಮಾಡಿರುವುದಿಲ್ಲ. ಸದರಿ ಪಂಚನಾಮೆಗೆ ಸ್ಥಳವನ್ನು ಯಾರು ತೋರಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮಹಜರೊಂದಿಗೆ ನನ್ನ ಜೊತೆ ಯಾರು ಸಹಿ ಮಾಡಿರುತ್ತಾರೆ ಮತ್ತು ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಎರಡು ಫೋಟೋಗಳನ್ನು ತೋರಿಸಿದ್ದು, ಸದರಿ ಫೋಟೋಗಳಲ್ಲಿ ತನ್ನ ಇರುವಿಕೆಯನ್ನು ನೋಡಿ ಒಪ್ಪಿಕೊಂಡಿದ್ದರಿಂದ ಸದರಿ ಫೋಟೋಗಳನ್ನು ನಿಪಿ-5 ಮತ್ತು ನಿಪಿ-6 ಎಂದು ಗುರುತಿಸಲಾಯಿತು. ಸದರಿ ಫೋಟೋಗಳನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು

ದಿ.06.08.2026

ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲು ಎ.ಪಿ.ಪಿ.ಯವರಿಂದಃ**

ದಿನಾಂಕ 14.09.2025 ರಂದು ಘಟನಾ ಸ್ಥಳಕ್ಕೆ ಪೊಲೀಸರು ಹಾಜರಿದ್ದು, ಚಾಸಾ-13 ರವರು ತೋರಿಸಿದ ಮೇರೆಗೆ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಸಂಜೆ 05.00 ರಿಂದ 05.45 ರವರೆಗೆ ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಹಜರಿನ ಸಮಯದಲ್ಲಿ ಕೃತ್ಯ ನಡೆದ ಸ್ಥಳದಲ್ಲಿ ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

ಮಹಜರಿಗೆ ಹಾಜರಿದ್ದು, ಫೋಟೋಗಳನ್ನು ತೆಗೆದಿದ್ದರೂ ಸಹಾ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಇರುವುದಿಲ್ಲ ಎಂದು ಹೇಳಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.